ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕೆಜಿಬಿವಿ/2009–10/2010–11 ದಿನಾಂಕ: 06.01.2014

## ಸುತ್ತೋಲೆ

**ವಿಷಯ:** ಎಂ.ಹೆಚ್.ಆರ್.ಡಿ ದಾಖಲಾತಿ ನಿಯಮಗಳ ಅನುಸಾರ ಕೆ.ಜಿ.ಬಿ.ವಿಗಳಲ್ಲಿ ದಾಖಲಾತಿಯನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ:**1)ಕಛೇರಿ ಸುತ್ತೋಲೆ ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕೆಜಿಬಿವಿ/ಮಾರ್ಗಸೂಚಿ/2013–14 ದಿ: 07.05.13
2)ದಿನಾಂಕ: 10.05.2013 ರಂದು ಈ ಕಛೇರಿಯಲ್ಲಿ ನಡೆದಕೆಜಿಬಿವಿ ಮುಖ್ಯಶಿಕ್ಷಕರ/ವಾರ್ಡನ್‌ಗಳ ಪ್ರಗತಿ ಪರಿಶೀಲನಾ ಸಭೆ.
3) ಮಾನ್ಯ ನಿರ್ದೇಶಕರು ಎಂ.ಹೆಚ್.ಆರ್.ಡಿರವರ ಪತ್ರದ(ಫ್ಯಾಕ್ಸ್) ಸಂಖ್ಯೆ:ನಂ.21–2/2013EEBದಿನಾಂಕ:17.9.2013/ಶಿಇಕಾ/ಪ್ರಾ.ಪಾ.ಶಿ ದಿ:25/10/2013
4) ಈ ಕಚೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:03.10.2013

******

ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ 71 ಬ್ಲಾಕ್‌ಗಳಲ್ಲಿ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳಿಗಾಗಿ ಕೆ.ಜಿ.ಬಿ.ವಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.ಮೇಲ್ಕಂಡ ಉಲ್ಲೇಖ–1 ಮತ್ತು 2 ರಂತೆದಾಖಲಾತಿ ನಿಯಮಗಳ ಅನುಸಾರಎಲ್ಲಾಕೆಜಿಬಿವಿ ವಸತಿಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿಅರ್ಹ ಹೆಣ್ಣು ಮಕ್ಕಳ ದಾಖಲಾತಿಯನ್ನು ಸಾಧಿಸಿ ಯೋಜನೆಯ ಸದುಪಯೋಗ ಪಡಿಸಿಕೊಳ್ಳಲುಸೂಚಿಸಲಾಗಿತ್ತು.

ಮಾನ್ಯರಾಜ್ಯಯೋಜನಾ ನಿರ್ದೇಶಕರು ಹಾಗೂ ರಾಜ್ಯಯೋಜನಾಕಛೇರಿಯಜಿಲ್ಲಾ ನೋಡಲ್ ಅಧಿಕಾರಿಗಳು ಜಿಲ್ಲಾ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿಕೆಜಿಬಿವಿ ಶಾಲೆಗಳಿಗೆ ಭೇಟಿ ನೀಡಿದಾಗಈ ಕೆಳಕಂಡ ಅರ್ಹ ಮಕ್ಕಳಿಗೆ ಕೆಜಿಬಿವಿ.ಗಳಲ್ಲಿ ಅವಕಾಶ ಮಾಡಿಕೊಡದೆ ಬಹುತೇಕ ಶಾಲೆಗೆ ಹೋಗುವ ವಿದ್ಯಾರ್ಥಿನಿಯರನ್ನೆದಾಖಲೆ ಮಾಡಿಕೊಂಡಿರುವುದು ಗಮನಿಸಲಾಗಿದೆ. ಉಲ್ಲೇಖ–3ರ ಎಂ.ಹೆಚ್.ಆರ್.ಡಿರವರ ಪತ್ರದಲ್ಲಿಯೂ ಸಹ ಸದರಿಅಂಶವನ್ನುಒತ್ತಿ ಹೇಳಿರುತ್ತಾರೆ.ಆದ್ದರಿಂದ ಕೆಜಿಬಿವಿ.ಗಳಲ್ಲಿ ದಾಖಲಾತಿ ನಿಯಮಗಳ ಉಲ್ಲಂಘನೆಯಾಗಿರುವುದುಕಂಡು ಬಂದಿದ್ದುಇದಕ್ಕೆ ಸಂಬಂಧಿಸಿದ ಜಿಲ್ಲೆಗಳು ಹೊಣೆಗಾರರಾಗುತ್ತೀರಿ.ಈ ಬಗ್ಗೆ ಕೆಜಿಬಿವಿ.ಗಳಲ್ಲಿ ಪರಿಶೀಲಿಸಿ ದಾಖಲಾತಿ ನಿಯಮಗಳನುಸಾರ ಅರ್ಹ ಮಕ್ಕಳಿಗೆ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡುವುದು. ವಿಶೇಷವಾಗಿ ಅಲ್ಪಸಂಖ್ಯಾತ ಮುಸ್ಲಿಂ ವಿದ್ಯಾರ್ಥಿನಿಯರು ಹಾಗೂ ವಿಕಲಚೇತನ ಮಕ್ಕಳ ದಾಖಲಾತಿಕಡಿಮೆ ಪ್ರಮಾಣದಲ್ಲಿದ್ದುಇವರದಾಖಲಾತಿಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುವುದು.

<u>ನವೆಂಬರ್ 2013ರಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಕಾರ್ಯ ನಡೆದಿದ್ದು, ಅದರಂತೆಪ್ರತಿಜಿಲ್ಲೆ/ಬ್ಲಾಕ್/ಕ್ಲಸ್ಟರ್‌ವಾರು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಂತೆ ಸದರಿ ವಿದ್ಯಾರ್ಥಿನಿಯರನ್ನು ಕೆ.ಜಿ.ಬಿ.ವಿಗಳಲ್ಲಿ ದಾಖಲಾತಿ ಮಾಡಿಅವರಿಗೆ ವಿಶೇಷ ಸಾಮಾರ್ಥ್ಯಆಧಾರಿತತರಬೇತಿ ನೀಡಿ, ಕೆ.ಜಿ.ಬಿ.ವಿಗಳಲ್ಲಿ 2014–15ನೇ ಸಾಲಿನಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡಲುಈಗಿನಿಂದಲೇಅಗತ್ಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವುದು.ಜಿಲ್ಲಾವಾರು/ಬ್ಲಾಕ್‌ವಾರು/ಕ್ಲಸ್ಟರ್‌ವಾರುಇಂತಹ ಎಷ್ಟು ವಿದ್ಯಾರ್ಥಿನಿಯರನ್ನುಕೆ.ಜಿ.ಬಿ.ವಿ/ಕೆ.ಕೆ.ಜಿ.ಬಿ.ವಿಗಳಲಿ ದಾಖಲೆ ಮಾಡಲಾಗುವುದು ಎಂಬ ವಿದ್ಯಾರ್ಥಿನಿಯರ ಪಟ್ಟಿಯನ್ನು ದಿನಾಂಕ:10.02.2014ರ ಒಳಗಾಗಿ ssagirlsed@yahoo.co.in ಗೆ ಸಲ್ಲಿಸುವುದು.</u>

### ಕೆ.ಜಿ.ಬಿ.ವಿ ಶಾಲೆಗಳ ದಾಖಲಾತಿ ನಿಯಮಗಳು

1. ಪ್ರಾಥಮಿಕ ಹಂತದಲ್ಲಿ 10+ ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ, ಶಾಲೆಬಿಟ್ಟ ಹಾಗೂ ನಿರ್ಗತಿಕ, Single Parent ಬಾಲಕಿಯರಿಗೆ ಪ್ರಥಮಆದ್ಯತೆ ನೀಡುವುದು.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಶೇ.75% ರಷ್ಟು ಮತ್ತು ಬಡತನರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ಶೇ.25% ರಷ್ಟು ಮೀಸಲಾತಿ ನೀಡುವುದು.
3. ಮುಸ್ಲಿಂ ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿನಿಯರದಾಖಲಾತಿಜನಸಂಖ್ಯೆ ಪ್ರಮಾಣಕ್ಕೆ ಹೋಲಿಸಿದಲ್ಲಿ ಕಡಿಮೆಇದ್ದುಅವರದಾಖಲಾತಿಗೆ ವಿಶೇಷ ಗಮನ ಹರಿಸುವುದು.
4. ಅಂಗವಿಕಲತೆಯಿಂದಾಗಿ ಶಾಲೆಯಿಂದ ಹೊರಗೆ ಉಳಿದಿರುವ ವಿಕಲಚೇತನಹೆಣ್ಣುಮಕ್ಕಳಿಗೂ ಈ ಶಾಲೆಗಳಲ್ಲಿ ಆದ್ಯತೆ ನೀಡುವುದು.
5. 2013–14ನೇ ಸಾಲಿಗೆ ಕೆ.ಜಿ.ಬಿ.ವಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ನಿಯೋಜಿಸುವ ಬಗ್ಗೆ :
   ಮೌಲ್ಯಮಾಪನತಂಡದವರುಕೆ.ಜಿ.ಬಿ.ವಿ ವಸತಿ ಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳು ಖಾಲೆಯಿರುವ ಬಗ್ಗೆ ವರದಿಸಿರುತ್ತಾರೆ. (ವಿಶೇಷವಾಗಿ ವಿಜ್ಞಾನ ಶಿಕ್ಷಕರ ಹುದ್ದೆಗಳ ಬಗ್ಗೆ ಪ್ರಸ್ತಾಪಿಸುತ್ತಾ) ಈ ಕೂಡಲೇ ಸದರಿ ಶಾಲೆಗಳಲ್ಲಿ ಖಾಲಿ ಇರುವಇಲಾಖೆವತಿಯಿಂದ ನಿಯೋಜಿಸುವಎಲ್ಲಾ ಶಿಕ್ಷಕರ ಹುದ್ದೆಗಳನ್ನು ಈ ಸಾಲಿಗೆ ನಿಯೋಜನೆಯ ಮೇಲೆ ತುರ್ತಾಗಿಭರ್ತಿ ಮಾಡಲುಕ್ರಮವಹಿಸುವುದು.ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನುಮಾಹಿತಿಗಾಗಿಲಗತ್ತಿಸಿದೆ.

**ಮೇಲ್ಕಂಡ ಉಲ್ಲೇಖ–3 ರಂತೆ2013–14ನೇ ಸಾಲಿಗೆ ಕೆಜಿಬಿವಿ ಶಾಲೆಗಳಲ್ಲಿ ಪೂರ್ಣ ಪ್ರಮಾಣದಾಖಲಾತಿ ಸಾಧಿಸಿ ವಿವಿಧ ಚಟುವಟಿಕೆಗಳಿಗೆಅನುಮೋದಿಸಿರುವಅನುದಾನವನ್ನು ಸಮರ್ಪಕರೀತಿಯಲ್ಲಿಪೂರ್ಣ ಪ್ರಮಾಣದಲ್ಲಿಸದ್ಬಳಕೆ ಮಾಡಿಕೊಳ್ಳಲು ತಿಳಿಸಿರುತ್ತಾರೆ.**ಆದ್ದರಿಂದ ಈಗಾಗಲೆ ತಿಳಿಸಿರುವಂತೆ ದಾಖಲಾತಿ ನಿಯಮಗಳ ಅನುಸಾರ ಪೂರ್ಣ ಪ್ರಮಾಣದದಾಖಲಾತಿ ಸಾಧಿಸುವುದು ಹಾಗೂ ಕೆಜಿಬಿವಿ.ಗಳಲ್ಲಿ ವಿವಿಧ ಚಟುವಟಿಕೆಗಳಿಗೆ ನಿಗದಿಪಡಿಸಿರುವ ಅನುದಾನವನ್ನು ಸಂಪೂರ್ಣವಾಗಿ ನಿಯಮಾನುಸಾರ ಬಳಕೆ ಮಾಡಿಕೊಳ್ಳುವುದು.ಪೂರ್ಣ ಪ್ರಮಾಣದದಾಖಲಾತಿ ಸಾಧಿಸದಿದ್ದಲ್ಲಿ ಮುಖ್ಯಶಿಕ್ಷಕರು/ಬ್ಲಾಕ್/ಜಿಲ್ಲಾ ಹಂತದ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು.ಜಿಲ್ಲಾ ಹಾಗೂ ತಾಲ್ಲೂಕಿನ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ಹರಿಸುವುದು.

ಸಹಿ/–
**ರಾಜ್ಯಯೋಜನಾನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**ಅಗತ್ಯಕ್ರಮಕ್ಕಾಗಿ,**

1. ಸಂಬಂಧಿಸಿದ ಜಿಲ್ಲೆಗಳಉಪನಿರ್ದೇಶಕರು(ಆ) ಮತ್ತು ಡಿವೈಪಿಸಿ ರವರಅಗತ್ಯಕ್ರಮಕ್ಕಾಗಿ.
2. ಉಪನಿರ್ದೇಶಕರು(ಆ)/ಡಿವೈಪಿಸಿ ಮೂಲಕ ಬಿ.ಇ.ಓ., ಬಿ.ಆರ್.ಸಿ ಮತ್ತುಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರುಗಳಿಗೆ.
3. ರಾಜ್ಯಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, ನಂ. 367, 11ನೇ ಕ್ರಾಸ್, 2ನೇ ಬ್ಲಾಕ್, 4ನೇ ಮೇನ್, ಆರ್.ಟಿ.ನಗರ, ಬೆಂಗಳೂರು ರವರಅಗತ್ಯಕ್ರಮಕ್ಕಾಗಿ.

**ಮಾಹಿತಿಗಾಗಿ,**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ರವರಿಗೆ ಅನುಪಾಲನೆಗಾಗಿ ಕೋರುತ್ತ.
2. ಕಛೇರಿ ಪ್ರತಿ.